...ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ
...ಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/04/2008 ರ ನಡವಳಿಗಳು

[illegible]: ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ (ಬಳ್ಳಾರಿ ರಸ್ತೆ) ಯನ್ನು ಯಾಂತ್ರಿಕವಾಗಿ ... ಆಹ್ವಾನಿಸುವ ಬಗ್ಗೆ.

...ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಹಿಂದುಳಿದ ವಾರ್ಡ್‌ಗಳನ್ನು ಅಭಿವೃದ್ಧಿ ... ಪ್ಯಾಕೇಜ್‌ಗಳ ಅಡಿಯಲ್ಲಿ, ವಾರ್ಡ್–89 [illegible] ಯಲ್ಲಿ [illegible]. ಪ್ಯಾಕೇಜ್–89 ಸಿ ಯು ಈ ಕೆಳಗಿನ ಕಾಮಗಾರಿಗಳನ್ನು ಒಳಗೊಂಡಿರುತ್ತದೆ.

1. 4ನೇ 'ಸಿ' ಮುಖ್ಯರಸ್ತೆ, ಹೆಚ್.ಆರ್.ಬಿ.ಆರ್.ಲೇಔಟ್, 2ನೇ ಬ್ಲಾಕಿನಲ್ಲಿರುವ ಉದ್ಯಾನವನವನ್ನು ಅಭಿವೃದ್ಧಿಪಡಿಸುವ ಕಾಮಗಾರಿ.
2. ಕೆ.ಎಸ್.ಎಫ್.ಸಿ.ಲೇಔಟ್‌ನ ಪಾರ್ಕ್ ರಸ್ತೆಯಲ್ಲಿ ಸಮುದಾಯ ಭವನವನ್ನು ನಿರ್ಮಿಸುವ ಕಾಮಗಾರಿ.
3. ಔಷದಾಲಯ (Dispensary) ವನ್ನು ನಿರ್ಮಿಸುವ ಕಾಮಗಾರಿ.

ಸದರಿ ಪ್ಯಾಕೇಜ್–89 'ಸಿ' ಯ ಈ ಮೇಲಿನ ಮೂರು ಕಾಮಗಾರಿಗಳನ್ನು ಒಳಗೊಂಡ ಅಂದಾಜು ಮೊತ್ತವಾದ ರೂ.56,75,000.00 (SR 2003-04) ಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಪಡೆದು ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರಾದ ಶ್ರೀ. ಎಸ್.ಸಿ.ರಮೇಶ್‌ರವರಿಗೆ ರೂ.84,84,125.00 ಗಳಿಗೆ ಅಂದರೆ SR 2005-06 ಹಾಗೂ ಹೆಚ್ಚುವರಿ ಮಾರುಕಟ್ಟೆ ದರಗಳ ಮೇಲೆ ಶೇ.9.67 ರಷ್ಟು ಹೆಚ್ಚುವರಿ ದರಗಳಿಗೆ ನಿರ್ವಹಿಸಲಾಗಿತ್ತು.

ಕಾಮಗಾರಿಯನ್ನು ನಿರ್ವಹಿಸುವ ಸಮಯದಲ್ಲಿ ಸ್ಥಳದಲ್ಲಿನ ಮಣ್ಣಿನ ಗುಣಕ್ಕೆ ಅನುಗುಣವಾಗಿ ಕಟ್ಟಡದ ಭದ್ರತೆಯ ದೃಷ್ಠಿಯಿಂದ ತಳಪಾಯವನ್ನು ಮರು ವಿನ್ಯಾಸ ಮಾಡಲಾಗಿರುತ್ತದೆ ಹಾಗೂ ಸಮುದಾಯ ಭವನ ನಿರ್ಮಾಣ ಹಂತದಲ್ಲಿ ಕಟ್ಟಡ ನಿರ್ಮಾಣಕ್ಕೆ ಅವಶ್ಯಕವಿದ್ದು ಕೆಲವು ಹೆಚ್ಚುವರಿ ಅಂಶಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ. ಈ ಹೆಚ್ಚುವರಿ ಅಂಶಗಳನ್ನು ಅಳವಡಿಸಿಕೊಂಡ ಕಾರಣ, ಈ ಪ್ಯಾಕೇಜ್‌ನಲ್ಲಿ ಕೈಗೊಳ್ಳಬೇಕಾಗಿದ್ದ ಔಷಧಾಲಯ ನಿರ್ಮಾಣ ಹಾಗೂ ಉದ್ಯಾನವನದ ಅಭಿವೃದ್ಧಿಯನ್ನು ಕೈಬಿಡಲಾಗಿರುತ್ತದೆ.

ಈ ಹಿನ್ನೆಲೆಯನ್ನು ವಾರ್ಡ್–89 'ಸಿ' ಪ್ಯಾಕೇಜ್‌ನ ಕಾಮಗಾರಿಯ ಅಂದಾಜು ಪಟ್ಟಿಯು ಮಾರ್ಪಾಡಾಗಿದ್ದು, ಮುಖ್ಯ ಲೆಕ್ಕಾಧಿಕಾರಿಗಳ ಸಲಹೆಯಂತೆ ಹೆಚ್ಚುವರಿ ಅಂಶಗಳಿಗೆ ಎಸ್.ಆರ್.2006–07 ರ ಮೇಲೆ ಶೇ.7.53 ರಷ್ಟು ಟೆಂಡರ್ ಪ್ರೀಮಿಯಂನಂತೆ ನೀಡಿ, ಮಾರ್ಪಾಡು ಅಂದಾಜು ಪಟ್ಟಿಯನ್ನು ರೂ.70,98,723.06 ಗಳಿಗೆ ತಯಾರಿಸಲಾಗಿರುತ್ತದೆ.

ಈ ಮೇಲೆ ತಿಳಿಸಿರುವಂತೆ, ಹಿಂದುಳಿದ ವಾರ್ಡ್‌ಗಳಿಗೆ ವಿಶೇಷ ಅಭಿವೃದ್ಧಿ ಪ್ಯಾಕೇಜ್–89 'ಸಿ' ಕಾಚರಕನಹಳ್ಳಿ ಕಾಮಗಾರಿಯ ಮಾರ್ಪಾಡು ಅಂದಾಜುಪಟ್ಟಿಯ ಮೊತ್ತ ರೂ.70,98,723.06 ಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:02/04/2008 ರ ಟಿಪ್ಪಣಿ.

ನಿರ್ಣಯ: ಆಯುಕ್ತರವರ ದಿನಾಂಕ:02/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

ಪ್ಯಾಕೇಜ್-2ರ ಆರ್ಥಿಕ ಬಿಡ್ ಅಂದಾಜು ಮೊತ್ತ ರೂ.9,94,000/-

| ಕ್ರ. ಸಂ. | ಗುತ್ತಿಗೆದಾರರ ಹೆಸರು | ನಮೂದಿಸಿದ ಮೊತ್ತ | ಷ ರಾ |
|---|---|---|---|
| 1 | ಶ್ರೀ. ಬಿ.ಆರ್.ಗಣೇಶ್ | 14,14,987/- | ಅಂದಾಜು ಮೊತ್ತಕ್ಕಿಂತ ಶೇ.42.35 ರಷ್ಟು ಅಧಿಕ |
| 2 | ಶ್ರೀ. ಪಿ. ಗೋಪಿನಾಥ ರೆಡ್ಡಿ | 11,89,499/- | ಅಂದಾಜು ಮೊತ್ತಕ್ಕಿಂತ ಶೇ.19.67 ರಷ್ಟು ಅಧಿಕ |

ಆರ್ಥಿಕ ಬಿಡ್‌ನಲ್ಲಿ ಶ್ರೀ. ಗೋಪಿನಾಥ ರೆಡ್ಡಿಯವರು ಪ್ಯಾಕೇಜ್-1 ರಲ್ಲಿ ರೂ.11,49,499/- ಮತ್ತು ಪ್ಯಾಕೇಜ್-2 ರಲ್ಲಿ ರೂ.11,89,499/- ದರಗಳನ್ನು ನಮೂದಿಸಿ ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ಕನಿಷ್ಠ ಗುತ್ತಿಗೆದಾರರು ನಮೂದಿಸಿರುವ ದರಗಳು ಹೆಚ್ಚಿನದಾದ್ದರಿಂದ ಸಂಧಾನ ನಡೆಸಲಾಗಿ, ಶ್ರೀ. ಗೋಪಿನಾಥ ರೆಡ್ಡಿ ರವರು ಪ್ಯಾಕೇಜ್-1 ಕ್ಕೆ ರೂ.10,000/- ಗಳನ್ನು ಮತ್ತು ಪ್ಯಾಕೇಜ್-2 ಕ್ಕೆ ರೂ.15,000/- ಗಳನ್ನು ಕಡಿಮೆ ಮಾಡಿರುತ್ತಾರೆ. ಸಂಧಾನಿತ ದರಗಳು ಕೆಳಕಂಡತೆ ಇರುತ್ತದೆ.

| ಕ್ರಮ ಸಂಖ್ಯೆ | ಪ್ಯಾಕೇಜ್ ಸಂಖ್ಯೆ | ಯಶಸ್ವಿ ಬಿಡ್ಡ್‌ದಾರರು | ಟೆಂಡರ್ ಅಂದಾಜು ಮೊತ್ತ | ಯಶಸ್ವಿ ಬಿಡ್‌ದಾರರು ಮೊದಲು ನಮೂದಿಸಿದ್ದ ಮೊತ್ತ | ಸಂಧಾನದ ನಂತರ ಅಂತಿಮ ದರದ ಮೊತ್ತ |
|---|---|---|---|---|---|
| 01 | 01 | ಶ್ರೀ. ಪಿ. ಗೋಪಿನಾಥ ರೆಡ್ಡಿ | 9,75,400/- | 11,49,499/- | 11,39,499/- (ಶೇ.16.82% ಅಧಿಕ) |
| 02 | 02 | ಶ್ರೀ. ಪಿ. ಗೋಪಿನಾಥ ರೆಡ್ಡಿ | 9,94,000/- | 11,89,499/- | 11,74,499/- (ಶೇ.18.15% ಅಧಿಕ) |

ಗುತ್ತಿಗೆದಾರರ ಸಂಧಾನದಿಂದಾಗಿ ಪ್ಯಾಕೇಜ್-1 ಕ್ಕೆ ವಾರ್ಷಿಕ ರೂ.1,36,73,988/- (ಒಂದು ಕೋಟಿ ಮೂವತ್ತಾರು ಲಕ್ಷದ ಎಪ್ಪತ್ಮೂರು ಸಾವಿರದ ಒಂಭೈನೂರ ಎಂಬತ್ತೆಂಟು ಮಾತ್ರ) ಮತ್ತು ಪ್ಯಾಕೇಜ್-2 ಕ್ಕೆ ವಾರ್ಷಿಕ ರೂ.1,40,93,988/- (ಒಂದು ಕೋಟಿ ನಲವತ್ತು ಲಕ್ಷದ ತೊಂಬತ್ಮೂರು ಸಾವಿರದ ಒಂಭೈನೂರು ಎಂಬತ್ತೆಂಟು ಮಾತ್ರ) ಗಳಾಗುತ್ತದೆ.

ಈ ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:31/03/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:31/03/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:19/04/2008 ರ ನಡವಳಿಗಳು**

**ವಿಷಯ ಸಂಖ್ಯೆ:46/2008-09**

ವಾರ್ಡ್ ಸಂಖ್ಯೆ:17 ರಲ್ಲಿನ (1ನೇ ಮತ್ತು 3ನೇ ಹಂತ) ಪ್ಯಾಕೇಜ್-50 ರಸ್ತೆಗಳಿಗೆ ಡಾಂಬರೀಕರಣ, ಗಲ್ಲಿಗಳಿಗೆ ಕಾಂಕ್ರೀಟ್ ಹಾಕುವ ಮತ್ತು ರಸ್ತೆಗಳಿಗೆ ಚರಂಡಿ ಹಾಗೂ ಸೈಡ್ ವಾಕ್ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ವಾರ್ಡ್ ಸಂಖ್ಯೆ:17 ರಲ್ಲಿನ (1ನೇ ಮತ್ತು 3ನೇ ಹಂತ) ಪ್ಯಾಕೇಜ್-50 ರಸ್ತೆಗಳಿಗೆ ಡಾಂಬರೀಕರಣ, ಗಲ್ಲಿಗಳಿಗೆ ಕಾಂಕ್ರೀಟ್ ಹಾಕುವ ಮತ್ತು ರಸ್ತೆಗಳಿಗೆ ಚರಂಡಿ ಹಾಗೂ ಸೈಡ್ ವಾಕ್ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ರಾಜಾಜಿನಗರ) ರವರು ಎರಡನೇ ಭಾರಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ ಏಕೈಕ ಟೆಂಡರ್ ಸ್ವೀಕೃತವಾಗಿದ್ದು, ಟೆಂಡರ್ ಸಿಂಧುವಾಗಿರುತ್ತದೆ. ಕಾರ್ಯಪಾಲಕ ಅಭಿಯಂತರರು (ರಾಜಾಜಿನಗರ) ರವರು ಏಕೈಕ ಟೆಂಡರ್‌ದಾರರಾದ ಶ್ರೀ. ಆರ್.ನಾಗರಾಜ್ ರಾವ್ ರವರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ. ಟೆಂಡರ್ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ.

| | | |
|---|---|---|
| 1) ಅಂದಾಜು ಮೊತ್ತ | : | ರೂ.125.02 ಲಕ್ಷ (2005-06ನೇ ಸಾಲಿನ ದರಪಟ್ಟಿಯಂತೆ ತಯಾರಿಸಿರುವುದು) |
| 2) ಟೆಂಡರ್‌ಗಿಟ್ಟ ಮೊತ್ತ | : | ರೂ.1,24,48,605.00 |
| 3) ಗುತ್ತಿಗೆದಾರರ ಹೆಸರು | : | ಶ್ರೀ.ಆರ್. ನಾಗರಾಜ್ ರಾವ್ |
| 4) ಗುತ್ತಿಗೆದಾರರು ನಮೂದಿಸಿದ ಮೊತ್ತ | : | ರೂ.2,07,38,132.30 ಅಥವಾ ಶೇಕಡವಾರು 66.59 ರಷ್ಟು ಹೆಚ್ಚುವರಿ ದರಗಳು |
| 5) ಸಂಧಾನದ ನಂತರದ ದರಗಳು | : | ರೂ.1,75,37,695.00 ಅಥವಾ ಶೇಕಡವಾರು 40.88 ರಷ್ಟು ಹೆಚ್ಚುವರಿ ದರಗಳು |
| 6) ಚಾಲ್ತಿ ದರಪಟ್ಟಿಗೆ (ಸಿಎಸ್‌ಆರ್2006-07) ಹೋಲಿಸಿದಾಗ ಬಂದಂತಹ ಶೇಕಡವಾರು: | | 8.17% ರಷ್ಟು ಹೆಚ್ಚುವರಿ ದರಗಳು |

ಸದರಿ ಕಾಮಗಾರಿಯ ಟೆಂಡರ್ ಅನುಮೋದಿಸುವ ಪ್ರಸ್ತಾವನೆಗೆ ಪ್ರಧಾನ ಅಭಿಯಂತರರು ಕಛೇರಿಯಿಂದ ಮಾನ್ಯ ಆಡಳಿತಾಧಿಕಾರಿಗಳಿಗೆ ಟಿಪ್ಪಣಿ ಮಂಡಿಸಿದ್ದು, ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ ದಿನಾಂಕ:06/03/2007 ರಂದು ಮಾನ್ಯ ಆಡಳಿತಗಾರರ ನಡವಳಿ ವಿಷಯದ ಸಂಖ್ಯೆ:432/2006-07 ರಲ್ಲಿ ನಿರ್ಣಯಿಸಿದಂತೆ ಸದರಿ ಕಾಮಗಾರಿಯ ಟೆಂಡರ್ ಮೊತ್ತ ರೂ.1,75,37,695.00 ಬದಲಾಗಿ ಬೆರಳಚ್ಚು ದೋಷದಿಂದ ರೂ.1,66,03,075.00 ಗಳೆಂದು ತಪ್ಪಾಗಿ ನಮೂದಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಧಾನ ಅಭಿಯಂತರರಿಗೆ, ಶ್ರೀ.ಆರ್. ನಾಗರಾಜ್ ರಾವ್ ರವರು ಸಂಧಾನದ ನಂತರ ನೀಡಿದ ದರಗಳನ್ನು ಪ್ರಸಕ್ತ ಸಾಲಿನ ದರಪಟ್ಟಿ 2006-07 ಕ್ಕೆ ಹೋಲಿಸಿದಾಗ ಬಂದಂತಹ ಶೇಕಡ 8.17 ರಷ್ಟು ಹೆಚ್ಚುವರಿ ದರಗಳು ಅಥವಾ ಟೆಂಡರ್ ಮೊತ್ತವಾದ ರೂ. 1,75,37,694.90 (ರೂ.ಒಂದು ಕೋಟಿ ಎಪ್ಪತ್ತೈದು ಲಕ್ಷದ ಮೂವತ್ತೇಳು ಸಾವಿರದ ಆರನೂರ ತೊಂಬತ್ನಾಲ್ಕು ಮತ್ತು ಪೈಸೆ ತೊಂಬತ್ತು ಮಾತ್ರ) ಗಳ ಟೆಂಡರ್ ಅನುಮೋದಿಸಲು ಹಾಗೂ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.125.02 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಘನ ಸರ್ಕಾರಕ್ಕೆ ಟಿಪ್ಪಣಿ ಮಂಡಿಸಲು ಆದೇಶ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23/03/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:23/03/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

ವಿಷಯದ ಸಂಖ್ಯೆ:55/08–09

ಬೃಹತ್ (ವಿಶೇಷ) ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಪೂರ್ಣ ಯೋಜನಾ ವರದಿಯನ್ನು ತಯಾರಿಸಲು ಸಮಾಲೋಚಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.

**ಪ್ರಸ್ತಾವನೆ:**

ಕಾರ್ಯಪಾಲಕ ಅಭಿಯಂತರರು, ಬೃಹತ್ ರಸ್ತೆಗಳು (ವಿಶೇಷ) ರವರು ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ಇವರು ನೀಡಿರುವ ಸಲಹೆ ಮತ್ತು ಸೂಚನೆಯ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆರ್ಟಿರಿಯಲ್ ಮತ್ತು ಸಬ್ ಆರ್ಟಿರಿಯಲ್ ರಸ್ತೆಗಳನ್ನು ಹೊರತು ಪಡಿಸಿ, ಆಯುಕ್ತರು ತಾಂತ್ರಿಕ ಸಲಹೆಗಾರರು ನೀಡಿರುವ ಸಲಹೆಯಂತೆ ಅತೀ ಹೆಚ್ಚು ವಾಹನ ಸಾಂದ್ರತೆ ಇರುವ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ, 22 ವಿಶೇಷ ರಸ್ತೆಗಳನ್ನು ಪಟ್ಟಿ ಮಾಡಿದ್ದು, ಸದರಿ ರಸ್ತೆಗಳು ಸುಮಾರು 45.10 ಕಿ.ಮೀ.ಗಳ ಉದ್ದವಿರುತ್ತದೆ. ಈ ರಸ್ತೆಗಳಲ್ಲಿ ಗಣ್ಯ ವ್ಯಕ್ತಿಗಳು, ಅತಿ ಗಣ್ಯ ವ್ಯಕ್ತಿಗಳು ಮತ್ತು ಅಂತರರಾಷ್ಟ್ರೀಯ ಸದಸ್ಯರುಗಳು ಓಡಾಡುವ ರಸ್ತೆಗಳಾಗಿದ್ದು, ಈ ರಸ್ತೆಗಳಿಂದ ಕೆಲವು ಪ್ರಮುಖ ಕೇಂದ್ರಗಳು ಸಂಪರ್ಕ ಕಲ್ಪಿಸುವ ಅಂದರೆ, ಉದಾಹರಣೆಗೆ, ವಿಧಾನಸೌಧ, ಹೈ ಕೋರ್ಟ್, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಇತ್ಯಾದಿ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಕೂಡ ಆಗಿರುತ್ತದೆ ಎಂಬುದಾಗಿ ಪ್ರಸ್ತಾವನೆ ಮಾಡಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು ಬೃಹತ್ ರಸ್ತೆಗಳು (ವಿಶೇಷ) ರವರು ಗುರುತಿಸಿ ಪಟ್ಟಿ ಮಾಡಿರುವ 22 ರಸ್ತೆಗಳನ್ನು ಮೇಲ್ದರ್ಜೆಗೆ ಅಭಿವೃದ್ಧಿ ಪಡಿಸಲು, ಸುಮಾರು ರೂ.45 ಕೋಟಿಗಳು ವೆಚ್ಚವಾಗುವುದರಿಂದ, ಪೂರ್ಣ ಯೋಜನಾ ವರದಿಯನ್ನು ತಯಾರಿಸುವುದು ಒಂದು ಮುಖ್ಯ ಅಂಶವಾಗಿರುತ್ತದೆ. ಪೂರ್ಣ ಯೊಜನಾ ವರದಿಯಲ್ಲಿ ಕೆಳಕಂಡ ತಾಂತ್ರಿಕ ಅಂಶಗಳನ್ನು ಸಮಾಲೋಚಕರು ಗಣನೆಗೆ ತೆಗೆದುಕೊಂಡು ಸೇರಿಸಿಕೊಳ್ಳವುದು ಅಗತ್ಯವಾಗಿರುತ್ತದೆ.

1) ಸುಗಮ ಸಂಚಾರಕ್ಕೆ ಅಭಿವೃದ್ಧಿ ಗುಣಮಟ್ಟ ತರುವುದು.
   ಅ) ರಸ್ತೆಭದ್ರತೆ–ಬಿ.ಬಿ.ಡಿ/ಸಂಚಾರದ ಅಂಕಿ ಅಂಶಗಳು
   ಆ) ಮರುರಸ್ತೆ ಭದ್ರತೆ–ರಸ್ತೆಯ ಭದ್ರತೆ ಚರಿತ್ರೆ (ಮೂರು ವರ್ಷಗಳ ಸುಧಾರಣೆ ಸೇರಿ)
2) ರಸ್ತೆಯ ಅಗತ್ಯತೆಗೆ ತಕ್ಕಂತೆ ಅಭಿವೃದ್ಧಿ ಹಾಗೂ ಬೀದಿ ದೀಪಗಳನ್ನು ಮೇಲ್ದರ್ಜೆಗೆ ತರುವುದು.
3) ಅಗತ್ಯತೆ ಇರುವ ಕಡೆ ಸೇತುವೆ ಮತ್ತು ಅಡಿಗಾಲುವೆ ನಿರ್ಮಾಣ ಮಾಡುವುದು.
4) ಸಾಮಾನ್ಯ ಸೌಲಭ್ಯಗಳಿಗೆ ಭೂಗತ ಕೇಬಲ್ ಅಳವಡಿಸಲು, ಡಕ್ಟ್ ನಿರ್ಮಾಣ.
5) ಅಂತರರಾಷ್ಟ್ರೀಯ ಮಟ್ಟಕ್ಕೆ ಸುಭದ್ರ ಪಾದಚಾರಿ ರಸ್ತೆ ನಿರ್ಮಾಣ ಮಾಡುವುದು (ಅಗತ್ಯತೆಗೆ ತಕ್ಕಂತೆ ಕುರ್ಚಿ, ಹೂವಿನ ಕುಂಡಗಳು, ಸಸಿ ಸಂಗ್ರಹಣೆ, ತೊಟ್ಟಿ ಮುಂತಾದವು)
6) ಚರಂಡಿ ಹಾಗೂ ಸೀಳು ಕೊಳವೆ ಚರಂಡಿ ಅಭಿವೃದ್ಧಿ ಹಾಗೂ ಮೇಲ್ದರ್ಜೆಗೆ ತರುವುದು.
7) ಅಗತ್ಯತೆ ಇರುವ ಕಡೆ ರಸ್ತೆ ಸಂಪರ್ಕ ಮತ್ತು ಜಾಮಿಟ್ರಿಕ್ಸ್ ವಿನ್ಯಾಸದಂತೆ ರಸ್ತೆ ತಿರುವು ಸುಗಮ ಅಭಿವೃದ್ಧಿ ಪಡಿಸಿ ಸಂಚಾರಕ್ಕೆ ಅನುವು ಮಾಡುವುದು.

# ಬೆಂಗಳೂರು ಮಹಾನಗರ ಪಾಲಿಕೆ

93



8) ಅಗತ್ಯದ ಕಡೆ ಪಾದಚಾರಿಗಳ ರಸ್ತೆ ದಾಟುವ ಹೈ ರೈಸಡ್ ಪುಟಪಾಟುಗಳ ನಿರ್ಮಾಣ.
9) ನಾಲ್ಕು ಪಥ ರಸ್ತೆ ಇರುವ ಕಡೆ ಮೀಡಿಯನ್ ಅನ್ನು ಅಳವಡಿಸುವುದು.
10) ಇತರೆ ತಾಂತ್ರಿಕ ಅಗತ್ಯತೆಗಳಂತೆ ರಸ್ತೆ ಸೌಲಭ್ಯಗಳನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಅಭಿವೃದ್ಧಿ ಪಡಿಸುವುದು.

ಈ 22 ವಿಶೇಷ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಪೂರ್ಣ ಅಭಿವೃದ್ಧಿ ಯೋಜನೆ ಸಿದ್ಧಪಡಿಸಲು ಸಮಾಲೋಚಕರನ್ನು ಟೆಂಡರ್ ಮೂಲಕ ನೇಮಕ ಮಾಡಲು ರೂ.50.00 ಲಕ್ಷಗಳ ಅಂದಾಜು ಮಾಡಲಾಗಿದೆ ಮತ್ತು ಈ ವೆಚ್ಚಕ್ಕೆ ಕಾಮಗಾರಿ ಸಂಕೇತವು ದೊರೆತಿರುತ್ತದೆ.

ಮೇಲಿನ ಎಲ್ಲಾ ವಿವರಗಳನ್ನು ಮಾನ್ಯ ಆಡಳಿತಗಾರರವರ ಗಮನಕ್ಕೆ ತರುತ್ತಾ, ಪಟ್ಟಿ ಮಾಡಿರುವ 22 ವಿಶೇಷ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸಮಾಲೋಚಕರನ್ನು ನೇಮಕ ಮಾಡಿಕೊಳ್ಳಲು, ಮಂಡಿಸಿರುವ ರೂ.50.00 ಲಕ್ಷಗಳ ಅಂದಾಜು ಪಟ್ಟಿಗೆ ಹಾಗೂ ಕಾರ್ಯಪಾಲಕ ಅಭಿಯಂತರರು, ಬೃಹತ್ ರಸ್ತೆಗಳು (ವಿಶೇಷ) ರವರು ಮಂಡಿಸಿರುವ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26/03/2008 ರ ಟಿಪ್ಪಣಿ.

<u>ನಿರ್ಣಯ:</u> ಆಯುಕ್ತರವರ ದಿನಾಂಕ:26/03/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:21/04/2008 ರ ನಡವಳಿಗಳು

ವಿಷಯದ ಸಂಖ್ಯೆ:56/2008-09

5ನೇ ಪರಿಷ್ಕೃತ ವೇತನ ಮತ್ತು ನಿವೃತ್ತಿ ವೇತನದ ಬಾಕಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿ ವರ್ಗದವರಿಗೆ ಪಾವತಿಸವ ಸಂಬಂಧ ಸರ್ಕಾರದ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ.

ಪ್ರಸ್ತಾವನೆ:

ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ 8 ಎಸ್.ಆರ್.ಪಿ 2007, ದಿನಾಂಕ:09/04/2007 ಹಾಗೂ ಆದೇಶ ಸಂಖ್ಯೆ:ಎಫ್.ಡಿ 8 ಎಸ್.ಆರ್.ಪಿ 2007, ಬೆಂಗಳೂರು, ದಿನಾಂಕ:16/05/2007 ಮತ್ತು ನಗರಾಭಿವೃದ್ಧಿ ಇಲಾಖೆಯ ಆದೇಶ ಸಂಖ್ಯೆ:ನಅಇ 66 ಬಿಎಂಎಸ್ 2007 (ಭಾಗ-1), ಬೆಂಗಳೂರು, ದಿನಾಂಕ:13/07/2007 ರಂತೆ 5ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸಿನ ಪರಿಷ್ಕೃತ ವೇತನ ಶ್ರೇಣಿಗಳು 1, ಜುಲೈ 2005 ರಿಂದ ಜಾರಿಗೆ ಬಂದಿರುವುದಾಗಿ ಭಾವಿಸಿ, ಆರ್ಥಿಕ ಸೌಲಭ್ಯಗಳನ್ನು ದಿನಾಂಕ:01/04/2006 ರಂತೆ ಪಾಲಿಕೆಯ ಸಿಬ್ಬಂದಿಗಳಿಗೆ ನೀಡಲು ವೇತನ ಆಯೋಗದ ಶಿಫಾರಸ್ಸುಗಳನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಮಾನ್ಯ ಆಡಳಿತಗಾರರ ದಿನಾಂಕ:23/07/2008 ರ ನಡವಳಿಯಲ್ಲಿ ತೀರ್ಮಾನಿಸಲಾಗಿರುವಂತೆ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ ಹಾಗೂ ವೇತನ ಶ್ರೇಣಿಗಳ ಪರಿಷ್ಕರಣೆಯ ಕಾರಣದಿಂದ ಆಗಿರುವ ವೇತನ ಮತ್ತು ಭತ್ಯೆಗಳ ಹಾಗೂ ನಿವೃತ್ತಿ ವೇತನದ ಹೆಚ್ಚಳವನ್ನು ದಿನಾಂಕ:01/04/2007 ರಿಂದ ನಗದಾಗಿ ಸಂದಾಯ ಮಾಡಲಾಗಿರುತ್ತದೆ. 1ನೇ ಏಪ್ರಿಲ್ 2006 ರಿಂದ 31ನೇ ಮಾರ್ಚ್ 2007 ವರೆಗಿನ ಅವಧಿಯ ವೇತನ ಮತ್ತು ಭತ್ಯೆಗಳ ಹಾಗೂ ನಿವೃತ್ತಿ ವೇತನದ ಬಾಕಿ ಮೊತ್ತವನ್ನು ಮೇಲ್ಕಂಡ ಸರ್ಕಾರಿ ಆದೇಶಗಳಂತೆ 2008-09 ನೇ ಆರ್ಥಿಕ ವರ್ಷದಲ್ಲಿ ಸಂದಾಯ ಮಾಡಲಾಗುವುದೆಂದು ತೀರ್ಮಾನಿಸಲಾಯಿತು.

ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ 8 ಎಸ್.ಆರ್.ಪಿ 2007, ಬೆಂಗಳೂರು, ದಿನಾಂಕ:16/05/2007 ಹಾಗೂ ಸಂಖ್ಯೆ:ಎಫ್.ಡಿ:05 ಎಸ್.ಆರ್.ಪಿ 2007, ದಿನಾಂಕ:25/03/2008 ರ ಸರ್ಕಾರಿ ಆದೇಶಗಳಂತೆ ಪರಿಷ್ಕೃತ ವೇತನ ಮತ್ತು ನಿವೃತ್ತಿ ವೇತನದ ಬಾಕಿಯನ್ನು ಯಥಾವತ್ತಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿಗಳಿಗೆ ಅಳವಡಿಸಿಕೊಂಡರೆ 2007 ರ ಕರ್ನಾಟಕ ನಾಗರೀಕ ಸೇವಾ (ಪರಿಷ್ಕೃತ ವೇತನ) ನಿಯಮಗಳನ್ವಯ ವೇತನ ನಿಗಧಿಯಿಂದ ದಿನಾಂಕ: 01/04/2006 ರಿಂದ 31/03/2007 ರ ವರೆಗಿನ ಅವಧಿಯಲ್ಲಿ ಹೆಚ್ಚಳವಾಗಿರುವ ವೇತನ ಮತ್ತು ಭತ್ಯೆಗಳ ಬಾಕಿ ಮೊತ್ತವನ್ನು 2008-09 ನೇ ಸಾಲಿನ ಆರ್ಥಿಕ ವರ್ಷದಲ್ಲಿನ ಆಯವ್ಯಯ ಇತರೆ ಭತ್ಯೆಗಳು ಲೆಕ್ಕ ಶೀರ್ಷಿಕೆಯಡಿ ಪಾವತಿಸುವುದಕ್ಕೆ ಅವಕಾಶ ಕಲ್ಪಿಸಲಾಗಿದೆಯೆಂದು ಮುಖ್ಯ ಲೆಕ್ಕಾಧಿಕಾರಿಗಳು ವರದಿ ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ 8 ಎಸ್.ಆರ್.ಪಿ 2007, ಬೆಂಗಳೂರು, ದಿನಾಂಕ:16/05/2007 ಹಾಗೂ ಸಂಖ್ಯೆ:ಎಫ್.ಡಿ:05 ಎಸ್.ಆರ್.ಪಿ 2007, ದಿನಾಂಕ:25/03/2008 ರ ಸರ್ಕಾರಿ ಆದೇಶಗಳಲ್ಲಿ ಮೇಲ್ಕಂಡಂತೆ ಪ್ರಸ್ತಾಪಿಸಿರುವ ಪರಿಷ್ಕೃತ ವೇತನ ಮತ್ತು ನಿವೃತ್ತಿ ವೇತನ ಬಾಕಿ ಮೊತ್ತವನ್ನು ಪಾವತಿಸುವ ಸೌಲಭ್ಯವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನೌಕರರಿಗೆ ಯಥಾವತ್ತಾಗಿ ನೀಡುವ ಸಲುವಾಗಿ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16/04/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:16/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು